


International Journal of Kannada Research
www.kannadajournal.com

**ISSN: 2454–5813**
IJKR 2018; 4(4): 19-23
© 2018 IJKR
www.kannadajournal.com
Received: 05-08-2018
Accepted: 06-09-2018

**ರವಿ ಬ ಹಾದಿಮನಿ**
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಸರಕಾರಿ ಪ್ರಥಮ ದರ್ಜೆ ಕಾಲೇಜು,
ಕುಷ್ಟಗಿ, ಕೊಪ್ಪಳ ಜಿಲ್ಲಾ

**Correspondence**
**ರವಿ ಬ ಹಾದಿಮನಿ**
ಕನ್ನಡ ಸಹಾಯಕ ಪ್ರಾಧ್ಯಾಪಕರು,
ಸರಕಾರಿ ಪ್ರಥಮ ದರ್ಜೆ ಕಾಲೇಜು,
ಕುಷ್ಟಗಿ, ಕೊಪ್ಪಳ ಜಿಲ್ಲಾ

# ಕಪ್ಪು ತಪ್ಪೇ?

**ರವಿ ಬ ಹಾದಿಮನಿ**

ಈ ಲೇಖನದಲ್ಲಿ ಕಪ್ಪು ಅಥವಾ ಕರಿ ಬಣ್ಣವೆಂದರೆ ತಿರಸ್ಕರಿಸಿ ಮೂಗು ಮುರಿಯುವದರ ಜೊತೆಗೆ ಅಪಶಕುನ ಎಂಬ ಮೂಢಭಾವನೆ ಹೊಂದಿರುವವರು ಹೆಚ್ಚಾಗಿರುವುದನ್ನು ತಿಳಿಯುವುದರ ಕುರಿತು, ಜನಪದ ಸಂಸ್ಕೃತಿಯಲ್ಲಿಯೂ ಗರತಿಯೂ ಕೂಡ ಕರಿಬಣ್ಣದ ಸೀರೆ ಧರಿಸಬೇಡ ಎಂದು ನಯವಾಗಿ ತಿರಸ್ಕರಿಸಿರುವುದನ್ನು ಮನಗಾಣಬಹುದು. ಇಲ್ಲಿ ಕರಿ ಎಂದರೆ ಒಂದರ್ಥದಲ್ಲಿ ಕಪ್ಪು ಎಂದು, ಇನ್ನೊಂದು ಅರ್ಥದಲ್ಲಿ ಆನೆ ಎಂದು, ಮಗದೊಂದು ಅರ್ಥದಲ್ಲಿ ಎಣ್ಣೆ ಅಥವಾ ತುಪ್ಪದಲ್ಲಿ ಬೇಯಿಸು ಎಂದು ಅರ್ಥೈಸಿಕೊಳ್ಳಬಹುದು. ನಮ್ಮ ಹಿರಿಯರು ಕರಿಬಣ್ಣದ ಸೀರೆ ಅಥವಾ ಉಡುಪುಗಳನ್ನು ಧರಿಸಿಕೊಂಡು ಓಡಾಡಿದರೆ ಸೂರ್ಯನ ಶಾಖವನ್ನು ಅತಿಯಾಗಿ ಹೀರಿಕೊಂಡು ದೇಹದ ಉಷ್ಣತೆಯನ್ನು ಹೆಚ್ಚಿಸಿ ಆರೋಗ್ಯದಲ್ಲಿ ಏರುಪೇರಾಗಬಹುದೆಂಬ ಉದ್ದೇಶದಿಂದ ತಿರಸ್ಕರಿಸಿರಬಹುದು.

ಕಪ್ಪು ವರ್ಣಿಯರ ನಾಯಕ, ದಕ್ಷಿಣ ಆಫ್ರೀಕಾದ ಗಾಂಧಿ ಎಂದೇ ಖ್ಯಾತರಾದ ನೆಲ್ಸನ್ ಮಂಡೇಲಾರವರು ಇವರ ಹೋರಾಟವನ್ನು ಸಹಿಸದ ಅಲ್ಲಿಯ ಸರ್ಕಾರ 1962 ರಲ್ಲಿ ಬಂಧಿಸಿ, ಜೀವಾವಧಿ ಶಿಕ್ಷೆಯಾಗಿ ಸತತ ಇಪ್ಪತ್ತೇಳು ವರ್ಷಗಳ ಕಾಲ ರೆಬ್ಬನ್ ನಡುಗಡ್ಡೆಯ ಸೆರೆಮನೆಯಲ್ಲಿಯೇ ಕಳೆದು, 1989 ರಲ್ಲಿ ಬಿಡುಗಡೆಯಾಗಿ, ರಾಷ್ಟ್ರ ಸ್ವತಂತ್ರಗೊಂಡಾಗ ಪ್ರಥಮ ಅಧ್ಯಕ್ಷರಾಗಿ, ಕಪ್ಪು ವರ್ಣಿಯರ ಜನಾಂಗದ ಅಧಿನಾಯಕರಾಗಿದ್ದು ಇತಿಹಾಸ. ಇಲ್ಲಿ ನೆಲ್ಸನ್‌ರ ಅಭೂತಪೂರ್ವ ವ್ಯಕ್ತಿತ್ವ, ಧೀಮಂತಿಕೆ, ಹೃದಯ ಶ್ರೀಮಂತಿಕೆಯಿಂದ ಜನರ ಹೃದಯದಲ್ಲಿ ನೆಲಸಿದರೇ ವಿನಃ ಅವರ ಕಪ್ಪು ವರ್ಣ ಕಾಣುವುದಿಲ್ಲ. ಅವರು ಕಪ್ಪಾಗಿದ್ದರೂ ಅತ್ಯಂತ ಪ್ರೀತಿ–ವಿಶ್ವಾಸದಿಂದ ಕಾಣುತ್ತೇವೆ. ಅಂದರೆ ಕಪ್ಪು ಕೆಟ್ಟದಲ್ಲ ಎಂಬುದಕ್ಕೆ ನಿದರ್ಶನ. ಇವರ ವ್ಯಕ್ತಿತ್ವವನ್ನು ನಾಡಿನ ಕವಿಗಳಾದ ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪನವರು ಹಾಗೂ ರಂಜಾನ್ ದರ್ಗಾರವರು ಸಾಗರವನ್ನು ಬೊಗಸೆಯಲ್ಲಿ ಹಿಡಿದಿಡುವಂತೆ ಸುಂದರ ಸಾಲುಗಳಲ್ಲಿ ಮನೋಹರವಾಗಿ ಹಿಡಿದಿಟ್ಟಿರುವುದನ್ನು ನೋಡಬಹುದು.

ಭಾರತದಲ್ಲಿ ಸುಮಾರು 5.46 ಲಕ್ಷ ಚದರ ಕಿಲೋ ಮೀಟರ್‌ನಷ್ಟು ಕಪ್ಪು ಮಣ್ಣಿನ ಫಲವತ್ತಾದ ಭೂಮಿಯಿದೆ. ಕರ್ನಾಟಕವಂತೂ ಕಪ್ಪು ಮಣ್ಣಿನ ನಾಡೆಂದು ಪ್ರಸಿದ್ಧವಾಗಿದೆ. ಯಾವ ಬಣ್ಣ ನಾವು ತಿಳಿದಿರುವಂತೆ ಅಪಶಕುನ ಎಂದು ಕುಖ್ಯಾತಿಯನ್ನು ಪಡೆದಿದೆಯೋ ಅದೇ ಬಣ್ಣದ ಮಣ್ಣಿನಿಂದ ಕೃಷಿಗೆ ಅತ್ಯಂತ ಫಲವತ್ತಾದದ್ದು. ಇಂಥ ಮಣ್ಣಿನ ಭೂಮಿಯಲ್ಲಿ ಬಂಗಾರದ ಬೆಳೆಯನ್ನು ತೆಗೆಯುವ ರೈತನ ಪಾಲಿಗೆ ಜಗನ್ಮಾತೆ.ದಟ್ಟವಾದ ಕಪ್ಪು ಮೋಡಗಳು ಆವರಿಸಿದರೆ ಭಾರಿ ಮಳೆಯಾಗುವುದು ನಿಶ್ಚಿತ. ಇದರರ್ಥ ಕಪ್ಪು ಬಣ್ಣದಿಂದಲೂ ನಾಡಿಗೆ, ದೇಶಕ್ಕೆ ಶುಭ ಸಂಕೇತವಾಗಿದಲ್ಲವೆ?

ಕಾಗೆಯ ಕುರಿತು ಕುವೆಂಪುರವರು, ಬನದ ಅಂಬರಕ್ಕೇರುವ ಈ ವನಗಾಯಕನ ಗಾನ ಬ್ರಹ್ಮವನೇ ತೂಗಾಡುವುದಂತೆ, ಸ್ಮರಚಾಪಕೆ ನೀ ಸ್ವರಬಾಣವೆಂದು ಅಭಿಮಾನದ ಮಾತುಗಳಿಂದ ಕಪ್ಪಿನಲ್ಲಿಯೂ ಶ್ರೇಷ್ಠತೆಯನ್ನು ಕಾಣಬಯಸಿದ್ದಾರೆ.

ಒಟ್ಟಿನಲ್ಲಿ ಹೇಳುವುದಾದರೆ ಕಪ್ಪು ಎಂದು ನಾವು ಜರಿಯಬಾರದು, ಅದರಲ್ಲಿಯೂ ಉತ್ತಮ ಗುಣಗಳು ಅಡಕವಾಗಿರುವುದನ್ನು ಅರಿತು ಬಾಳುವುದು ಪ್ರಮುಖವಾಗುತ್ತದೆ. ರಾಷ್ಟ್ರಪತಿಗಳಾಗಿದ್ದ ಅಬ್ದುಲ್ ಕಲಾಂ ಅವರು "ಕಪ್ಪು ಬಣ್ಣ ಅಶುಭ ಸೂಚಕವಾಗಿರಬಹುದು ಆದರೆ ಪ್ರತಿ ಕಪ್ಪು ಹಲಗೆ ವಿದ್ಯಾರ್ಥಿಗಳ ಬದುಕನ್ನು ಬೆಳಗಿಸಬಲ್ಲದು" ಎಂಬ ಮಾತುಗಳನ್ನು ಸ್ಮರಿಸಿಕೊಂಡು ಕಪ್ಪು ಬಣ್ಣದ ಬಗ್ಗೆ ಇರುವ ತಿರಸ್ಕಾರದ ಭಾವನೆಯನ್ನು ಕಿತ್ತೊಗೆದು, ನಮ್ಮಲ್ಲಿ ಅಡಗಿ ಕುಳಿತಿರುವ ಮೌಢ್ಯಭಾವನೆಯನ್ನು ತೊಲಗಿಸಬೇಕಾಗಿದೆ. ಈ ಜಗತ್ತಿನಲ್ಲಿ ಯಾವುದೂ ಕೆಟ್ಟದ್ದಲ್ಲ, ಎಲ್ಲದರಲ್ಲಿಯೂ ಉತ್ತಮಾಂಶಗಳು ಇರುತ್ತವೆ ಎಂಬುದನ್ನು ಅರಿಯುವುದು ತೀರಾ ಅವಶ್ಯವಾಗಿದೆ.ಈ ನಿಟ್ಟಿನಲ್ಲಿ ಕಪ್ಪಿನಲ್ಲಿಯೂ ಒಳಿತನ್ನು ಕಾಣೋಣ.

ಕಪ್ಪು ಅಥವಾ ಕರಿ ಬಣ್ಣವೆಂದರೆ ನಮ್ಮ ಸಂಸ್ಕೃತಿಯ ಪರಂಪರೆಯ ಜನರ ಮನೋಭಾವನೆಯಲ್ಲಿ ಅದೊಂದು ಅಪಶಕುನದ ಬಣ್ಣವಾಗಿದೆ. ಜನಪದ ಸಂಸ್ಕೃತಿಯಲ್ಲಿಯೂ ಸಹ "ಕರಿಸೀರೆ ಉಡಬೇಡ, ಕರಿಮಣಿ ಬಿಡಬೇಡ, ತಲಬಾಗಿಲಿನ ಮುಂದ ನಿಂತು ನಗಬೇಡ" ಎಂದು ಗರತಿಯೂ ಹಾಡುತ್ತಾ ಕಪ್ಪುಬಣ್ಣವನ್ನು ನಯವಾಗಿ ತಿರಸ್ಕರಿಸುತ್ತಾಳೆ. ಇಲ್ಲಿ ಕರಿ ಎಂದರೆ ಒಂದು ಕಪ್ಪು ಎಂದಾದರೆ,

ಇನ್ನೊಂದು ಆನೆ ಎಂತಲೂ, ಮಗದೊಂದು ಎಣ್ಣೆ ಅಥವಾ ತುಪ್ಪದಲ್ಲಿ ಬೇಯಿಸು ಎಂದು ಅರ್ಥೈಸಿಕೊಳ್ಳಬಹುದು. ಇಲ್ಲಿ ಆನೆಯ ಬಣ್ಣವೂ ಕಪ್ಪಾಗಿರುವುದನ್ನು ಗಮನಿಸಬಹುದು.

ಕರಿ ಅಂಗಿ, ಸೀರೆಯನ್ನು ಧರಿಸಿದರೆ, ಹಿರಿಯ ಜೀವಿಗಳ, ಸಂಪ್ರದಾಯವಾದಿಗಳ ನಿಂದಾಸ್ತುತಿಯನ್ನು ಆಲಿಸಬೇಕಾಗಬಹುದು. ಒಂದು ರೀತಿಯಲ್ಲಿ ವಿಚಾರಿಸಿದರೆ ಅವರು ಅಭಿಪ್ರಾಯಪಟ್ಟಿರುವುದರಲ್ಲಿ ತಪ್ಪಿಲ್ಲವೆನಿಸುತ್ತದೆ. ಏಕೆಂದರೆ ಕಪ್ಪು ಬಣ್ಣದ ಬಟ್ಟೆಯನ್ನು ಧರಿಸಿಕೊಂಡು ಬಿಸಿಲಲ್ಲಿ ಓಡಾಡಿದರೆ, ಅದು ಕಪ್ಪಾಗಿರುವುದರಿಂದ ಸೂರ್ಯನ ಶಾಖವನ್ನು ಅತಿಯಾಗಿ ಹೀರಿಕೊಂಡು ದೇಹದ ಉಷ್ಣತೆಯನ್ನು ಹೆಚ್ಚಿಸಿ ಆರೋಗ್ಯದಲ್ಲಿ ಏರುಪೇರಾಗಬಹುದೆಂಬ ಉದ್ದೇಶದಿಂದ ಕಪ್ಪುಬಣ್ಣದ ಬಟ್ಟೆಯನ್ನು ತಿರಸ್ಕರಿಸಿರಬಹುದು. ಆದರೂ ಧರಿಸಿಕೊಂಡು ತಿರುಗಾಡುವವರ ಧೈರ್ಯ ಮೆಚ್ಚಲೇಬೇಕು. ಇಂಥವರು ಸೂರ್ಯದೇವನಿಗೆ ಸವಾಲೊಡ್ಡಿ ತಮ್ಮ ಬದುಕನ್ನು ಸಾಗಿಸುತ್ತಾರೆ.

ಆಫ್ರೀಕಾದ ಗಾಂಧಿ ಎಂದೇ ಪ್ರಸಿದ್ಧರಾದ ನೆಲ್ಸನ್ ಮಂಡೇಲಾರವರು ಬಿಳಿಯರ ಶೋಷಣೆ, ದಬ್ಬಾಳಿಕೆಗಳನ್ನು ವಿರೋಧಿಸುತ್ತ, ಮಾನವೀಯತೆ, ವಿಶ್ವಪ್ರೇಮವನ್ನು ಜಗತ್ತಿಗೆ ಸಾರಿದರು. ಇವರು ಅಲ್ಲಿಯ ಬಿಳಿಯರನ್ನು ದ್ವೇಷಿಸಲಿಲ್ಲ. ಆದರೆ ಅವರ ವರ್ಣನೀತಿಯನ್ನು ಮಾತ್ರ ಖಂಡಿಸಿದರು. ಜಗತ್ತಿನ ಎಲ್ಲ ಅಸಮಾನತೆಗಳು ಸುಟ್ಟು ಬೂದಿಯಾದಾಗ ಪ್ರೀತಿ–ಸ್ನೇಹ–ದಯೆ–ಸಮಾನತೆ–ಸಹಕಾರ–ಸೌಹಾರ್ದ ಈ ಭಾವನೆಗಳನ್ನು ಹೃದಯದಲ್ಲಿ ತುಂಬಿಕೊಂಡಾಗ ಮಾತ್ರ ನಿಜವಾದ ಮನುಷ್ಯ ಹುಟ್ಟುತ್ತಾನೆಂಬುದು ಮಂಡೇಲಾರ ಆಶಯವಾಗಿದೆ.

ಮಂಡೇಲಾರ ಹೋರಾಟವನ್ನು ಸಹಿಸದ ಅಲ್ಲಿಯ ಸರ್ಕಾರ 1962 ರಲ್ಲಿ ಬಂಧಿಸಿ ಜೀವಾವಧಿ ಶಿಕ್ಷೆ ನೀಡಿ, ಭಯಾನಕವಾದ ರೆಬ್ಬನ್ ನಡುಗಡ್ಡೆಯ ಸೆರೆಮನೆಯಲ್ಲಿಡಲಾಯಿತು. ಅಲ್ಲಿ ರಕ್ತ ಹೆಪ್ಪುಗಟ್ಟುವಂಥ ಚಳಿಯಲ್ಲಿ ಸುಣ್ಣದ ಕಲ್ಲುಗಳನ್ನು ಕುಟ್ಟುವ ಕಾಯಕವನ್ನು ಬೆಳಗಿನಿಂದ ಸಂಜೆವರೆಗೆ ಮಾಡಬೇಕಾಗಿತ್ತು. ಸತತ ಇಪ್ಪತ್ತೇಳು ವರ್ಷಗಳ ಕಾಲ ಘೋರಶಿಕ್ಷೆಯನ್ನು ಅನುಭವಿಸಿದರೂ ಆತ್ಮಸ್ಥೈರ್ಯ ಕಳೆದುಕೊಳ್ಳದೆ ಗಾಂಧೀಜಿಯವರ ತತ್ವಗಳಿಗೆ ಮಾರುಹೋಗಿ ಸತ್ಯ–ಅಹಿಂಸೆ–ಪ್ರೀತಿಗಳನ್ನು ತಮ್ಮ ಹೋರಾಟದ ಅಸ್ತ್ರಗಳನ್ನಾಗಿ ಬಳಸಿಕೊಂಡು ಹೋರಾಡಿದರು. 1989 ರಲ್ಲಿ ಬಿಡುಗಡೆಯಾಗಿ ತಮ್ಮ ರಾಷ್ಟ್ರ ಸ್ವತಂತ್ರಗೊಂಡಾಗ ಅದರ ಪ್ರಥಮ ಅಧ್ಯಕ್ಷರಾದರು. 1990 ನೇ ಅಕ್ಟೋಬರ್ 15 ರಂದು ನೆಲ್ಸನ್ ಮಂಡೇಲಾ ರವರು ಭಾರತಕ್ಕೆ ಬಂದಾಗ ಅಭೂತಪೂರ್ವ ಸ್ವಾಗತನೀಡಿ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿ ಭಾರತರತ್ನ ನೀಡಿ ವಿಶ್ವಮಾನವನಿಗೆ ಗೌರವಿಸಲಾಯಿತು.

ರಂಜಾನ್‌ದರ್ಗಾರವರು ತಮ್ಮ ನೆಲ್ಸನ್ ಮಂಡೇಲಾ ಕವಿತೆಯಲ್ಲಿ ಅವರನ್ನು "ಆತ ಮುಗುಳ್ನಗುತ್ತಾನೆ, ಮನುಷ್ಯರ ಮೇಲಿನ ಅಪಾರ ಪ್ರೀತಿಯಿಂದ, ಆಳುವ ಬಿಳಿಯರು ಬೆಚ್ಚುವ ಆತನ ವಾದದಲ್ಲಿ ಕಪ್ಪಿಲ್ಲ; ದ್ವೇಷಕ್ಕೆ ಮಾತ್ರ ವಿರೋಧ. ಆತ ಹೇಳುವುದಿಷ್ಟೇ; ಕಪ್ಪು–ಬಿಳಿ ಚರ್ಮಗಳ ಒಳಗೆ ಮನುಷ್ಯ ಒಬ್ಬನೇ, ಎಲ್ಲ ಅಸಮಾನತೆಗಳ ಬೂದಿಯಿಂದ ಹುಟ್ಟುವನು ಮನುಷ್ಯ ನಿಜ" ಎಂದು ಅವರ ವ್ಯಕ್ತಿತ್ವದ ಚಿತ್ರಣವನ್ನೇ ಕವಿ ಹೃದಯದಲ್ಲಿ ವ್ಯಕ್ತಗೊಂಡಿರುವುದು.

ಕವಿ–ಲೇಖಕರಾದ ಜಿ.ಎಸ್.ಎಸ್.ರವರು ತಮ್ಮ ಪ್ರೀತಿಯಿಲ್ಲದ ಮೇಲೆ ಕವನದಲ್ಲಿ ಪ್ರೀತಿಯ ಕಲ್ಪನೆ ವಿಶ್ವವಿಶಾಲತೆಯನ್ನು ಬಿಂಬಿಸಿದ್ದಾರೆ. ಮಂಡೇಲರು ಸೆರೆಮನೆಯಲ್ಲಿದ್ದುದನ್ನು ನೆನಪಿಸಿಕೊಂಡ ಕವಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಚಿಂತಿಸಿದ್ದಾರೆ. ಜಾತಿ–ಮತ–ಭಾಷೆ–ಬಣ್ಣಗಳ ಗೋಡೆಯ ನಡುವೆ ನರಳುವ ಪಾಡು ತಪ್ಪೀತು ಹೇಗೆ? ಪ್ರೀತಿಯ ಅಮೃತಧಾರೆಯನ್ನು ಹರಿಸುವುದು ಹೇಗೆ? ಕವಿಯ ಚಿಂತನೆಯಾಗಿದೆ.

"ಪ್ರೀತಿಯ ಇಲ್ಲದ ಮೇಲೆ ದಕ್ಷಿಣಾಫ್ರೀಕಾದ ಕಗ್ಗತ್ತಲಿಗೆ, ಬೆಳಕು ಮೂಡೀತು ಹೇಗೆ? ಸೆರೆಮನೆಯ ಕಂಬಿಯ ನಡುವೆ, ಕಮರುವ ಕನಸು ಕೊನರೀತು ಹೇಗೆ? ಬಿಳಿಜನರ ಕರಾಳ ಕಪ್ಪು ಹೃದಯಕ್ಕೆ ಕ್ರಿಸ್ತನ ಕರುಣೆ ಅರ್ಥವಾದೀತು ಹೇಗೆ? ಎಂದು ಪ್ರಶ್ನಿಸುತ್ತಾರೆ ಕವಿ.

ಒಟ್ಟಾಗಿ ಹೇಳುವುದಾದರೆ ಇಲ್ಲಿ ನೆಲ್ಸನ್‌ರ ಅಭೂತಪೂರ್ವ ವ್ಯಕ್ತಿತ್ವ, ಧೀಮಂತಿಕೆ, ಹೃದಯ ಶ್ರೀಮಂತಿಕೆ ಜನರ ಹೃದಯದಲ್ಲಿ ನೆಲೆಸಿದವೇ ವಿನಃ ಅವರು ಕಪ್ಪುವರ್ಣೀಯನೆಂದು ಕಾಣಲಿಲ್ಲ. ಅದೇ ರೀತಿ ಮಾನವ ಹಕ್ಕುಗಳ ಹೋರಾಟಗಾರ ಮಾರ್ಟಿನ್ ಲೂಥರ್, ಅಮೇರಿಕಾದ ಅಧ್ಯಕ್ಷರಾಗಿದ್ದ ಬರಾಕ್ ಒಬಾಮಾರನ್ನು ಜನರು ಪ್ರೀತಿಸಿದ್ದು ಅವರ ಹೃದಯದಲ್ಲಿ ಆ ಕಪ್ಪಿಲ್ಲದ ಪಾರದರ್ಶಕ ಪ್ರೀತಿ, ವ್ಯಕ್ತಿತ್ವವನ್ನು ಮಾತ್ರ.

ಕ್ರಿಕೆಟ್ ವಿಶ್ವಕಪ್ ಇತಿಹಾಸದಲ್ಲಿ ಜಗತ್ತಿನಲ್ಲಿ ಪ್ರಥಮ ವಿಜಯಶಾಲಿಗಳಾಗಿದ್ದು ವೆಸ್ಟ ಇಂಡೀಸ್ ತಂಡದ ನಾಯಕರಾಗಿದ್ದ ಕ್ಲೈವಲಾಯ್ಡ್ ನೇತೃತ್ವದ ತಂಡ. ಸತತವಾಗಿ ಎರಡು ವಿಶ್ವಕಪ್‌ನಲ್ಲಿ [1975–1979] ಜಯಗಳಿಸಿ ಪ್ರಶಸ್ತಿಯನ್ನು ತನ್ನ ಮುಡಿಗೇರಿಸಿಕೊಂಡು, 1983 ರಲ್ಲಿ ಹ್ಯಾಟ್ರಿಕ್ ಸಾಧನೆಯ ಹತ್ತಿರ ಬಂದು ಸ್ವಲ್ಪದರಲ್ಲಿಯೇ ವಿಜಯಮಾಲೆ ಭಾರತದ ಕಪಿಲ್‌ದೇವ ನೇತೃತ್ವದ ತಂಡದ ಕೊರಳಿಗೆ ಬಿತ್ತು. ಕೊನೆಕ್ಷಣದವರೆಗೂ ವೆಸ್ಟ್ ಇಂಡೀಸ್ ತಂಡದ ಆಟಗಾರರ ಹೋರಾಟ ಮೆಚ್ಚುವಂತದ್ದು.

ಯಾರಾದರೂ ಮಾತನಾಡುವ ಸಮಯದಲ್ಲಿ, ಪ್ರಯಾಣಕ್ಕೆ ಹೋಗುವ ತಯಾರಿಯಲ್ಲಿರುವಾಗ ಇವರ ಕಾರ್ಯ ಆಗುವುದೋ, ಬಿಡುವುದರ ಕುರಿತು ಯಾರಾದರೂ ಮಧ್ಯ ಮಾತನಾಡಿದ್ದರೆ, ಅದು ಕಾರ್ಯಸಿದ್ಧಿಸಿದರೆ ಹೊಗಳುವರು, ಸಿದ್ಧಿಸದಿದ್ದರೆ ಆ ವ್ಯಕ್ತಿಯ ಹೆಸರ್ಹೇಳಿ ಅವನದು ಕರಿನಾಲಿಗೆ ಎಂದು ಭಾವಿಸುತ್ತಾರೆ. ಒಂದರ್ಥದಲ್ಲಿ ಯಾವ ವ್ಯಕ್ತಿಯಾದರೂ ಹೇಳಿದ ನಕರಾತ್ಮಕ ಮಾತುಗಳು ನಿಜವಾದರೆ ಅದನ್ನು ಕರಿನಾಲಿಗೆ ಎಂದು ಕರೆಯುವುದು ರೂಢಿ.

ಭಾರತದಲ್ಲಿ ಸುಮಾರು 5.46 ಲಕ್ಷ ಚದರ ಕಿಲೋ ಮೀಟರ್‌ನಷ್ಟು ಪ್ರಮಾಣದಲ್ಲಿ ಕಪ್ಪುಮಣ್ಣಿನ ಫಲವತ್ತಾದ ಪ್ರದೇಶವನ್ನು ಹೊಂದಿದೆ. ಅದರಲ್ಲೂ ನಮ್ಮ ಕರ್ನಾಟಕ ರಾಜ್ಯವಂತೂ ಕಪ್ಪುಮಣ್ಣಿನ ನಾಡೆಂದೇ ಪ್ರಸಿದ್ಧವಾಗಿದೆ. ಯಾವ ಬಣ್ಣ ಅಪಶಕುನವೆಂದು ಕುಖ್ಯಾತಿಯನ್ನು ಪಡೆದಿದೆಯೋ ಅದೇ ಬಣ್ಣದ ಮಣ್ಣು ಕೃಷಿಗೆ ಅತ್ಯಂತ ಫಲವತ್ತಾದದ್ದು, ರೈತನ ಪಾಲಿಗೆ ಜಗನ್ಮಾತೆ. ಈ ಮಣ್ಣಿನಲ್ಲಿ ಹತ್ತಿ–ಜೋಳ–ಕಡಲೆ–ಹೆಸರು–ಎಳ್ಳು ಮುಂತಾದ ಬೆಳೆಗಳಿಗೆ ಸೂಕ್ತವಾದದ್ದೆಂದು ತಜ್ಞರ ಅಭಿಪ್ರಾಯ. ಇದೇ ಮಣ್ಣಿನ ಸತ್ವದಿಂದ ಬೆಳೆದ ಅಕ್ಕಿ ತಿಂದು ಹಕ್ಕಿಯಂತಾದ; ಜೋಳ ತಿಂದು ತೋಳದಂತಾದ ಎಂದು; ಅಕ್ಕಿಯ ಕನಿಷ್ಠತೆ, ಜೋಳದ ಮಹತ್ವತೆಯನ್ನು ವಿವರಿಸುತ್ತಾರೆ. ದಟ್ಟವಾದ ಕಪ್ಪು ಮೋಡ ಆವರಿಸಿದರೆ, ಭಾರಿ ಮಳೆಯಾಗುವುದು ನಿಶ್ಚಿತ ಅಂದರೆ ಕಪ್ಪು ಬಣ್ಣದಿಂದಲೂ ನಾಡಿಗೆ, ದೇಶಕ್ಕೆ ಶುಭ ಸಂಕೇತವಾಗಿದೆ.

'ತಮಸೋಮಾ ಜ್ಯೋತಿರ್ಗಮಯ' ಕತ್ತಲೆಯಿಂದ ಬೆಳಕಿನೆಡೆಗೆ ಕರೆದೊಯ್ಯು ಎನ್ನುತ್ತೇವೆ. ಅಂದರೆ ಇಲ್ಲಿ ಕತ್ತಲೆ ಅಜ್ಞಾನದ, ಬೆಳಕು ಸುಜ್ಞಾನದ ಸಂಕೇತವಾಗಿದೆ. ಒಬ್ಬ ಕುರಿಗಾರನನ್ನು, ಅವನ ಕುರಿಗಳ ಬದುಕನ್ನು ಕಂಡು ತುಚ್ಛವಾಗಿ ಕಾಣುವವರೆ ಹೆಚ್ಚು. ಅದೇ ಕುರಿಯ ತುಪ್ಪಳದಿಂದ ಮಾಡಿದ ಕರಿಕಂಬಳಿಗೆ ಬಂಗಾರದ ಬೆಲೆ ಕೊಡುತ್ತೇವೆ. ಶುಭಕಾರ್ಯದಲ್ಲಿ ಕಂಬಳಿಗೆ ವಿಶೇಷ ಗೌರವವಿದೆ.

ನಮ್ಮ ನಾಡಿನ ಸ್ತ್ರೀಯರು ಅಡುಗೆ ಮಾಡುವಾಗ ಪಾತ್ರೆಗಳನ್ನು, ಕಾವಲೆ–ಹಂಚುಗಳನ್ನು ಒಲೆಯ ಮೇಲಿಂದ ಕೆಳಗಿಳಿಸಲು ಸಹಾಯವಾಗುವುದು ಮಸಿ ಅರಿವೆಯೇ ಹೊರತು ಅವರ ಕೈಗಳಲ್ಲ. ರೊಟ್ಟಿ ಮಾಡಿ ಬೇಯಿಸುವ ಕಾವಲೆ ಹಂಚು ಕೂಡಾ ಕಪ್ಪು.

ಆಯುರ್ವೇದದಲ್ಲಿ ಕಪ್ಪುಜೀರಿಗೆ, ಕಪ್ಪುದ್ರಾಕ್ಷಿ, ಕರಿಎಳ್ಳು, ಮೆಣಸು, ಗುರೆಳ್ಳು, ಇನ್ನೂ ಮುಂತಾದ ಪಡಿಪದಾರ್ಥಗಳು ಕಪ್ಪಾಗಿರುವುದರಿಂದಲೇ ಪ್ರಸಿದ್ಧಿ ಪಡೆದು ಆರೋಗ್ಯವೃದ್ಧಿಯಲ್ಲಿ ಪ್ರಮುಖಪಾತ್ರ ನಿರ್ವಹಿಸುವುದನ್ನು ಕಾಣಬಹುದು.

ಭಾರತದ ಹನ್ನೆರಡನೇ ರಾಷ್ಟ್ರಪತಿಗಳಾದ ಡಾ. ಅಬ್ದುಲ್‌ಕಲಾಂರವರು "ಕಪ್ಪು ಬಣ್ಣ ಅಶುಭ ಸೂಚಕವಾಗಿರಬಹುದು ಆದರೆ ಪ್ರತಿ ಕಪ್ಪುಹಲಗೆ ವಿದ್ಯಾರ್ಥಿಗಳ ಬದುಕನ್ನು ಬೆಳಗಬಲ್ಲದು" ಎಂದು ಇದೇ ಕಪ್ಪುಬಣ್ಣದ ಕುರಿತು ಇರುವ ನಕರಾತ್ಮಕ ಅಂಶವನ್ನು ಸಕರಾತ್ಮಕವಾಗಿ ಅರ್ಥೈಸಿಕೊಂಡು ಹೇಳಿದ ಮಾತು ಬಹು ಅರ್ಥಪೂರ್ಣವಾದುದ್ದಾಗಿದೆ. ಕಲಾಂರ ಅಭಿಪ್ರಾಯದಲ್ಲಿ ಯಾವುದನ್ನು ನಾವು ತಿರಸ್ಕಾರ ಭಾವನೆಯಿಂದ,

ಹೀನದೃಷ್ಟಿಯಿಂದ ಕಾಣುತ್ತೇವೆಯೋ ಅದನ್ನು ಸ್ವೀಕಾರ ಮನೋಭಾವನೆಯಿಂದ ಮನ್ನಿಸಿ, ಕೆಟ್ಟದ್ದರಲ್ಲಿಯೂ ಒಳ್ಳೆಯ ಅಂಶವನ್ನು ಹೆಕ್ಕಿಕೊಂಡು ವಿದ್ಯಾರ್ಥಿ–ಶಿಕ್ಷಕ ಸಮುದಾಯಕ್ಕೆ ಸಾದರಪಡಿಸಿದ್ದಾರೆ.

"ಒಬ್ಬ ವ್ಯಕ್ತಿಯಲ್ಲಿರುವ ಒಳ್ಳೆಯ ಅಂಶಗಳನ್ನು ಮಾತ್ರ ಆಯ್ದುಕೊಳ್ಳಬೇಕೇ ಹೊರತು, ಅವನ ಕೆಟ್ಟ ವರ್ತನೆಯನ್ನಲ್ಲ" ಎಂದು ನನ್ನ ವಿದ್ಯಾಗುರುಮಾತೆಯರಾದ ಶ್ರೀಮತಿ ಪೆಡ್ನೆಕರ್ ಹೇಳಿದ್ದು ಸಮಂಜಸವೆನಿಸುತ್ತದೆ. ನಾಗಚಂದ್ರನ ರಾಮಚಂದ್ರ ಚರಿತ ಪುರಾಣದಲ್ಲಿ ರಾವಣನು ಕೆಟ್ಟವನಾಗಿದ್ದರೂ ಅವನು ಮಹಾಶಿವಭಕ್ತನಾಗಿದ್ದು, ಪರಂಗನಾವಿರತಿ ವ್ರತವನ್ನು ಆಚರಿಸಿ ಎಲ್ಲ ಸ್ತ್ರೀಯರನ್ನೂ ಗೌರವಭಾವನೆಯಿಂದ ಕಾಣುತ್ತಿದ್ದನ್ನು ನಾವು ಸ್ವೀಕರಿಸಿ ಒಪ್ಪಬೇಕಾಗಿದೆ. ರನ್ನನ ಗದಾಯುದ್ಧದಲ್ಲಿ, ದುರ್ಯೋಧನನಲ್ಲಿಯೂ ಎಷ್ಟೇ ಅಧರ್ಮಗುಣಗಳಿದ್ದರೂ ಅವನಲ್ಲಿರುವ ಛಲವಂತಿಕೆ ಗುಣವನ್ನು ಮೆಚ್ಚಬೇಕಾಗುತ್ತದೆ.

ಪಕ್ಷಿಗಳಲ್ಲಿ ಕಾಗೆ ಮತ್ತು ಕೋಗಿಲೆಯ ಮೈಬಣ್ಣವೂ ಕಪ್ಪಾಗಿದ್ದರೂ ಕಾಗೆ ಕೂಗಿದರೆ ಕರ್ಕಶ, ಕೋಗಿಲೆ ಹಾಡಿದರೆ ಇಂಪು ಎಂದು ಇಲ್ಲಿಯೂ ತಾರತಮ್ಯ. ಅಷ್ಟೇ ಏಕೆ ಹುಟ್ಟುವ ಮಕ್ಕಳಲ್ಲಿ ಗಂಡು ಮಗುವಿನ ಬಣ್ಣ ಕಪ್ಪಾಗಿದ್ದರೆ ಕೃಷ್ಣನೇ ಜನಿಸಿದನೆಂದು ಮುದ್ದಾಡುತ್ತಾರೆ. ಅದೇ ಹೆಣ್ಣಾಗಿದ್ದರೆ ಕಾಗೆ ಬಣ್ಣದವಳೆಂದು ಜನ್ಮದಾರಂಭದಿಂದ ತಿರಸ್ಕರಿಸುವುದಷ್ಟೇ ಅಲ್ಲ. ಅವಳಿಗೆ ಹೀಯಾಳಿಸಿ, ಚುಚ್ಚುಮಾತುಗಳನ್ನಾಡಿ ಅವಳ ಬದುಕನ್ನೇ ಬರಡಾಗಿಸುತ್ತಾರೆ.

ಕೋಗಿಲೆ ಪರಪುಟ್ಟನೆಂದು, ಕಾಜಾಣ ಬನದ ಎಲೆವನೆಯಲ್ಲಿ ಜನಿಸಿದ ಪರಿಶುದ್ಧಾತ್ಮನೆಂದು, ಇದರ ಹಾಡಿಗೆ ಮಾಗಿಯಬಂಧನವೂ ಇಲ್ಲ. ಕಾಡು–ನಾಡುಗಳನ್ನು ತುಂಬಿ ತುಳುಕಾಡಿ, ಬನದಿಂದ ಅಂಬರಕ್ಕೇರುವ ಈ ವನಗಾಯಕನ ಗಾನ ಬ್ರಹ್ಮವನೇ ತೂಗಾಡುವದಂತೆ, ಸ್ಮರಚಾಪಕೆ ನೀ ಸ್ವರಬಾಣವೆಂದು ಕವಿ ಕುವೆಂಪುರವರು ಕಾಗೆಯ ಬಗ್ಗೆ ಇರುವ ಅಭಿಮಾನದ ಉದ್ಗಾರಗಳಿವು.

ಒಂದು ಗಿಳಿಯು ಕಾಗೆಯ ಬಣ್ಣವನ್ನು ಕಂಡು ತನ್ನ ಸೌಂದರ್ಯದ ವರ್ಣನೆ ಮಾಡುತ್ತಾ, ನನ್ನನ್ನು ಬಹಳ ಜನರು ಪ್ರೀತಿಸುತ್ತಾರೆ, ನಾನಾಡುವ ಆಟಗಳನ್ನು ಇಷ್ಟಪಡುತ್ತಾರೆ. ಅಲ್ಲದೆ ಅವರ ಅರಮನೆ–ಮನೆಗಳಲ್ಲಿ ಸಾಕಿ ಹಣ್ಣು–ಹಂಪಲು ನೀಡಿ ಖುಷಿಪಡುವರೆಂದು ತನ್ನ ಸೌಂದರ್ಯದ ಬಗ್ಗೆ ಬಣ್ಣಿಸಿಕೊಂಡು; ಹೇ ಕಾಗೆ ನಿನ್ನನ್ನು ಯಾರು ಸಾಕುತ್ತಾರೆ, ಎಲ್ಲರೂ ನಿನ್ನ ಧ್ವನಿ, ಕರಿಬಣ್ಣವನ್ನು ಕಂಡು ತುಚ್ಛವಾಗಿ ಕಾಣುತ್ತಾರೆಂದು ಹಂಗಿಸಿ ಚುಚ್ಚು ಮಾತುಗಳನ್ನಾಡುತ್ತದೆ.

ಪ್ರತ್ಯುತ್ತರವಾಗಿ ಕಾಗೆ ಶಾಂತಚಿತ್ತದಿಂದ, ಗಿಳಿಗೆ ಕೂದಲಿದ್ದಾಕಿ ಹೆಂಗ ಬಾಚಿಕೊಂಡ್ರು ಚೆಂದ ಎನ್ನುವಂತೆ ನೀನು ಏನೇ ಮಾಡಿದರೂ ಜನರಿಗೆ ಸಂತೋಷವಾಗುತ್ತದೆ. ನಾನು ಇಷ್ಟು ಕಪ್ಪಾಗಿರುವುದರಿಂದಲೇ ಸ್ವತಂತ್ರವಾಗಿ ಹಾರಾಡಲು ಸಾಧ್ಯವಾಗಿದೆ. ನಿನ್ನ ಹಾಗೆ ಸುಂದರ ಬಣ್ಣ ಹೊಂದಿದ್ದರೆ ಪಂಜರದಲ್ಲಿ ಬಂಧಿಯಾಗಿರಬೇಕಾಗಿತ್ತು. ನಾನು ಕಪ್ಪಾಗಿರುವುದರಿಂದಲೇ ಎಲ್ಲರೂ ತಿರಸ್ಕಾರದಿಂದ, ದ್ವೇಷದಿಂದ ಕಂಡರೂ ಕೂಡ ನನಗೆ ಸಂತಸವಿದೆ. ಹೀಗಿರುವುದರಿಂದಲೇ ಬಾನಿನ ತುಂಬಾ ಹಾಯಾಗಿ ಹಾರಾಡಲು, ಪ್ರಕೃತಿ ಸೌಂದರ್ಯ ಅನುಭವಿಸಲು ಸಾಧ್ಯವಾಗಿರುವುದೆಂದು ಹೇಳಿದಾಗ ಪಂಜರದಲ್ಲಿ ಬಂಧಿಯಾದ ಗಿಳಿ ತಾನು ಸ್ವತಂತ್ರವಾಗಿ ಹಾರಾಡಿ ಈ ಬಾನಿನ, ಪ್ರಕೃತಿಯ ಸುಂದರತೆಯನ್ನು ಅನುಭವಿಸಲು ಸಾಧ್ಯವಿಲ್ಲದಿರುವುದನ್ನು ನೆನೆದು ತನ್ನ ತಪ್ಪಿನ ಅರಿವಾಯ್ತು. ಹಳ್ಳಿಯ ಜನರ ಅನುಭವದಿಂದ ಹೇಳುವುದಾದರೆ ಕೋಳಿ ಕೂಗುವುದಕ್ಕಿಂತ ಮೊದಲು ಕಾಗೆ ಕೂಗಿ ನಮ್ಮನ್ನು ಎಚ್ಚರಿಸುತ್ತದೆಂದು ಹೇಳುತ್ತಾರೆ. ಬೆಳಗಿನ ಜಾವ ನಾಲ್ಕು ಗಂಟೆಗೆ ಎದ್ದು ತನ್ನ ಬಳಗವನ್ನು ಕರೆಯುತ್ತದೆಂದು ಹೇಳುವರು.

ಕಾಗೆಯನ್ನು ನಾವು ಯಾರೂ ಸಾಕುವಯೋಚನೆ ಮಾಡದೆ ಇರಬಹುದು. ಅದು ಅನುಸರಿಸುವ ಜೀವನ ಮೌಲ್ಯಗಳು ನಮಗೆ ಮಾದರಿಯಾಗಿವೆ. ಒಂದು ಅಗುಳು ಅನ್ನ ಕಂಡರೂ ತನ್ನ ಬಳಗವನ್ನೆಲ್ಲಾ ಕರೆದು ತಿನ್ನುತ್ತದೆ. ಕಾಗೆಯಲ್ಲಿರುವ ಒಗ್ಗಟ್ಟನ್ನು, ಹಂಚಿಕೊಂಡು ತಿನ್ನುವ ಸ್ವಭಾವವನ್ನು ನಾವುಗಳೆಲ್ಲಾ ರೂಢಿಸಿಕೊಳ್ಳಲು ಪ್ರಯತ್ನಿಸಬೇಕು. ಅದಕ್ಕಾಗಿಯೇ "ಕಾಗೆಯೊಂದು ಅಗುಳ ಕಂಡರೆ ಕರೆಯದೆ ತನ್ನ ಬಳಗವ" ಎಂದು ಬಸವಣ್ಣನವರು ಹೇಳಿರುವುದು. ಯಾರಿಗಾದರೂ ಬಂಧು–ಬಾಂಧವರು ಬಹಳ ಸಂಖ್ಯೆಯಲ್ಲಿದ್ದರೆ ಕಾಗೆಬಳಗವೆಂದು ಕರೆಯುವುದನ್ನು ಕೇಳಿರುತ್ತೇವೆ. ಅದು ಕಪ್ಪಾಗಿದ್ದರೂ, ಕರ್ಕಶ ಧ್ವನಿಯಿದ್ದರೂ ಅದರ ಅಂತರಂಗದಲ್ಲಿರುವ ಹೂವಿನಂಥ ಮನಸ್ಸು ಅರಿಯುವುದು ಮುಖ್ಯ. ಅದಕ್ಕಾಗಿ ಮುಖನೋಡಿ ಮೊಳ ಹಾಕಬಾರದೆಂದು ಹೇಳುವುದುಂಟು.

ಈಗ ಕಾಗೆಯ ಧ್ವನಿ ಕರ್ಕಶವೆಂದು, ಕೋಗಿಲೆಯದು ಇಂಪು ಎಂದು ಹೇಳುವ ಜನರ ಮನಸ್ಸು ಮುಂದೊಂದು ದಿನ ಆ ಕಾಗೆಯು ಶತಮಾನಗಳ ಕಾಲ ತಿರಸ್ಕಾರ, ಅವಮಾನಗಳನ್ನು ಅನುಭವಿಸಿದ್ದನ್ನು ಕಂಡು ಕೋಗಿಲೆಗೆ ಇರುವ ಸ್ಥಾನಮಾನವನ್ನು ಕೊಟ್ಟರೂ ಕೊಡಬಹುದು. ಆಗೊಂದುವೇಳೆ ಕೊಟ್ಟರೆ ಕಾಗೆಯ ಬಳಗದ ಅದೃಷ್ಟವಾಗಬಹುದು. ಅವುಗಳು ಕೂಡ ನಮಗೆ ಸ್ವಾತಂತ್ರ್ಯ ದೊರೆತಾಗ ಎಷ್ಟು ಸಂಭ್ರಮಪಟ್ಟದ್ದೇವೋ ಅದರ ದುಪ್ಪಟ್ಟು ಸಂಭ್ರಮಿಸಬಹುದು.

ಇಂಪಾಗಿ ಹಾಡುವ ಕೋಗಿಲೆಯು, ಕಾಗೆಗೂಡಿನಲ್ಲಿರದ ಸಮಯದಲ್ಲಿ ಕಳ್ಳಿಯಂತೆ ಬಂದು ತನ್ನ ಮೊಟ್ಟೆಗಳನ್ನಿಟ್ಟು ಹೋಗಿ ಬಿಡುತ್ತದೆ. ಆದರೆ ಹೃದಯ ವೈಶಾಲ್ಯತೆಯನ್ನು ಹೊಂದಿರುವ, ತಾಯಿಯ ಪ್ರೀತಿಯುಳ್ಳ ಕಾಗೆಯು ಆ ಮೊಟ್ಟೆಗಳನ್ನು ತನ್ನವೆಂದು ಭಾವಿಸಿ, ಕಾವುಕೊಟ್ಟು ಮರಿ ಮಾಡಿ ಅವುಗಳನ್ನು ಜತನದಿಂದ ಸಲುಹಿ, ತಾಯಿ ಪ್ರೀತಿಕೊಟ್ಟು, ಕಾಳು–ಹಣ್ಣುಗಳನ್ನು ತಿನಿಸಿ, ಬೆಳೆಸುವ ಪರಿಯಿಂದಲೇ ಕೋಗಿಲೆಗಳು ಬದುಕಿ ಹಾರಾಡುತ್ತಾ,ಹಾಡುತ್ತಾ ಮಾವಿನ ಚಿಗುರು ತಿಂದು ಇಂಪಾದ ಹಾಡಿನಿಂದ ಜನರ ಹೃದಯ ಗೆಲ್ಲಲು ಸಾಧ್ಯವಾಗಿರುವುದು. ಒಂದು ವೇಳೆ ಕಾಗೆಯು ಅವು ತನ್ನ ಮೊಟ್ಟೆಗಳಲ್ಲವೆಂದು, ಕಾವು ಕೊಡದೆ, ಮೊಟ್ಟೆಗಳನ್ನು ತಿರಸ್ಕರಿಸಿದ್ದರೆ, ಈ ಜಗತ್ತಿನಲ್ಲಿ ಕೋಗಿಲೆಗಳನ್ನು ಕಾಣಲು, ಇಂಪಾದ ಧ್ವನಿಯನ್ನು ಕೇಳಲು ಸಾಧ್ಯವಾಗುತ್ತಿತ್ತೆ? ಕಾಗೆಯ ಅಸಾಧಾರಣ ಸಾಧನೆಗೆ ರಾಷ್ಟ್ರೀಯ ಪಕ್ಷಿಯ ಸ್ಥಾನ ನೀಡಬೇಕು. ಪ್ರಶಸ್ತಿ ನೀಡಿದರೆ ನೋಬೆಲ್ ಪ್ರಶಸ್ತಿ ಕೊಟ್ಟು ಗೌರವಿಸಬೇಕು. ಅದಕ್ಕಾಗಿಯೇ ಕುವೆಂಪುರವರು ಕಾಗೆಯ ಹೃದಯದ ಕುರಿತು ಹೀಗೆ ಹೇಳಿರುವರು.

> ಕಾಗೆಗಳ ಗೂಡಿನಲಿ ಮೋಸದಿಂ ಮೊಟ್ಟೆಯಿಟ್ಟು
> ಮರಿಗಳಾರೈಕೆಯನು ಅವುಗಳಿಗೆ ಬಿಟ್ಟು
> ಕಾಗೆಗಳೊ [ಬುದ್ಧಿಯಿಲ್ಲದ ಪೆದ್ದ ಪ್ರೊಲಿಟೇರಿಯಟ್ಟು]
> ಚೈತ್ರದಲ್ಲಿ ರಟ್ಟಾಗುವನ್ನೆಗಂ ಗುಟ್ಟು, ತಮ್ಮ ಮರಿಗಳ
> ಕೂಳನನ್ಯಗೆ ಗುಟುಕು ಕೊಟ್ಟು
> ಕೋಳು ಹೋಗುತ್ತಿದ್ದುವಂದು.

ಕರಿ ಇರುವೆಗಳಲ್ಲಿ ರಾಜ, ರಾಣಿ, ಸೈನಿಕ ಇರುವೆಗಳೆಂದು ವಿಂಗಡಿಸಲಾಗಿದೆ. ರಾಜ ಮತ್ತು ರಾಣಿ ಇರುವೆಗಳು ಕೇವಲ ಸಂತಾನೋತ್ಪತ್ತಿ ಕಾರ್ಯದಲ್ಲಿ ನಿರತವಾದರೆ, ಇವುಗಳಿಗೆ ಸಹಾಯಕವಾಗಿ ಸೈನಿಕ ಇರುವೆಗಳು ಆಹಾರವನ್ನು ಒದಗಿಸುವುದರ ಜೊತೆಗೆ ನಿರಂತರವಾಗಿ ಚೈತನ್ಯದಿಂದ ಕೂಡಿ, ಪ್ರತಿ ದೇಶದ, ಪ್ರತಿ ಸೈನಿಕರು ತಮ್ಮ ತಾಯ್ನಾಡಿನ ಗಡಿಕಾಯುವಂತೆ ತಮ್ಮ ಪರಿವಾರವನ್ನು ಕಾಯುತ್ತವೆ. ಇವುಗಳಲ್ಲಿ ಶಿಸ್ತು,ಸಂಯಮ,ಚಾಣಾಕ್ಷತನವನ್ನು ರೂಢಿಸಿಕೊಂಡು ಬದುಕುವುದನ್ನು ನಾವು ಕಲಿಯಬೇಕಾಗುತ್ತದೆ. ಇವು ಎಂದಿಗೂ ಅಡ್ಡದಿಡ್ಡಿಯಾಗಿ ಸಂಚರಿಸುವುದಿಲ್ಲ. ಒಂದೇ ಪಥದಲಿ ಸಾಲುಗಟ್ಟಿ ಹೋಗುವುದನ್ನು ನಮ್ಮ ಶಾಲಾ ಮಕ್ಕಳು, ಪ್ರತಿಯೊಬ್ಬ ನಾಗರಿಕರು ರೂಢಿಸಿಕೊಳ್ಳಬೇಕಾದದ್ದು ತುಂಬಾ ಅಗತ್ಯವಿದೆ, ಅನಿವಾರ್ಯತೆಯೂ ಇದೆ. ತನ್ನ ತೂಕದ ಐವತ್ತುಪಟ್ಟು ಇರುವ ವಸ್ತುಗಳನ್ನು ಎಳೆದುಕೊಂಡು ಹೋಗುವುದನ್ನು ನೋಡಿದರೆ ಭಗೀರಥನ ಪ್ರಯತ್ನ ನೆನಪಿಸುತ್ತದೆ. ಇರುವೆಗಳ ಬದುಕುವ ಕ್ರಮ, ಅವುಗಳು ಪಾಲಿಸುವ ನಿಯಮಗಳನ್ನು ನಾವುಗಳು ನಮ್ಮ ಜೀವನದಲ್ಲಿ ರೂಢಿಸಿಕೊಳ್ಳುವುದು, ಅರಿತುಕೊಳ್ಳುವುದು ಮುಖ್ಯವಾಗಿದೆ.

ನಮ್ಮ ಆರಾಧ್ಯದೈವಗಳಾದ ಶಿವ,ವಿಷ್ಣು,ಕಾಳಿಯರ ವರ್ಣ ಕಪ್ಪು. ಬಹು ಆದಾಯ ತರುವ ದೇವಾಲಯಗಳ ಸ್ಥಾನದಲ್ಲಿರುವ ತಿರುಪತಿ ತಿಮ್ಮಪ್ಪನ ಬಣ್ಣ ಕಪ್ಪು ಎಂಬುದನ್ನು ಗಮನಿಸಬೇಕು. ಆದರೂ ಅವನು ಬಹುಜನರ

ಆರಾಧ್ಯದೈವನಾಗಿದ್ದಾನೆ. ಇಲ್ಲಿ ಅವನ ಮಹಿಮೆ,ಪವಾಡಗಳು ಮಹತ್ವ ಪಡೆಯುತ್ತವೆ ವಿನಃ ಅವನ ವರ್ಣವಲ್ಲ.

ಸೂರ್ಯನ ಎಷ್ಟೋಪಟ್ಟು ದೊಡ್ಡದಾಗಿರುವ ನಕ್ಷತ್ರಗಳ ಸೌಂದರ್ಯದ ಆಸ್ವಾದನೆ ಹೆಚ್ಚಾಗಬೇಕಾದರೆ, ಕಾರ್ಗತ್ತಲೆಯಲ್ಲಿ ಮಾತ್ರ ಸಾಧ್ಯ. ಈ ಜಗತ್ತು ಎಷ್ಟು ಕತ್ತಲೆಯಾಗಿರುತ್ತದೆಯೋ ಅಷ್ಟೇ ನಕ್ಷತ್ರಗಳ ಸೌಂದರ್ಯ ಕಾಣಬಹುದು. ಚಂದ್ರನ ಕಾಂತಿಯು ನೂರಪಟ್ಟಾಗಿರುತ್ತದೆ. ಅದಕ್ಕಾಗಿಯೇ "ಕವಿದಿರುವ ಕತ್ತಲೆಯೊಳೊಂದೆ ಸಂಚರಿಸುತಿದೆ ಅಮೃತ ಚಂದ್ರಕಿರಣ" ಎಂದು ಕುವೆಂಪು ಹೇಳಿರುವರು.

ತಾಯಿ ತನ್ನ ಮಗುವನ್ನು ಅಲಂಕರಿಸಿ, ಕೆಟ್ಟದೃಷ್ಟಿ ಬೀಳಬಾರದೆಂದು ಕಪ್ಪುಕಾಡಿಗೆ ಹಚ್ಚಿ 'ಕರಿಯಂಗಿ ಕಸೂತಿ; ತಲೆತುಂಬ ಜಾವುಳ' ಎಂದು ಹಾಡುತ್ತಾಳೆ. ನಮ್ಮ ಕೂದಲು ಕಪ್ಪಾಗಿದ್ದಷ್ಟು ಅಂದವಾಗಿ ಕಾಣುತ್ತೇವೆ. ಅವುಗಳಿಗೆ ಅಷ್ಟು ಮಹತ್ವ ನೀಡುತ್ತೇವೆ. ಅದೇ ಕೂದಲು ಬಿಳಿಯಾದರೆ ಕಪ್ಪು ಬಣ್ಣ ಬಳಿದುಕೊಂಡು ಕೃತಕ ಸೌಂದರ್ಯವನ್ನು ಮೆರೆಯುವವರನ್ನು ಕಾಣುತ್ತೇವೆ.

ರೈತರು ತಮ್ಮ ಹೊಲಗಳಲ್ಲಿ ಉತ್ತಮ ಫಸಲು ಬರಲು, ಜನರ ಕೆಟ್ಟದೃಷ್ಟಿ ಬೀಳದಿರಲೆಂದು ಕರಿಬಣ್ಣದ ಬೆದರುಗೊಂಬೆ ನಿಲ್ಲಿಸಿರುವುದನ್ನು ಕಂಡರೆ, ಆ ಬಣ್ಣದ ಸಹಕಾರದಿಂದ ಉತ್ತಮ ಬೆಳೆ ಬೆಳೆಯಲು ಸಾಧ್ಯವೆಂಬುದನ್ನು ನಮ್ಮ ರೈತ ಜನರ ನಂಬಿಕೆಯನ್ನು ಅರಿಯಬಹುದು.

"ಕಪ್ಪು ಹೆಂಡತಿಯಂತ ಕರಕರಿ ಮಾಡಬ್ಯಾಡ, ನೀರಲದಹಣ್ಣು ಬಲುಕಪ್ಪು ಇದ್ದರೂ ತಿಂದು ನೋಡಿದರ ರುಚಿಬಾಳ" ಎಂದು ಜನಪದ ಗರತಿ ಕಪ್ಪು ಹೆಣ್ಣು ಮತ್ತು ಕಪ್ಪಾದರೂ ನೀರಲಹಣ್ಣು ಬಲು ಸ್ವಾದಿಷ್ಟವಾದ್ದೆಂಬುದನ್ನು ಕಪ್ಪಿನಲ್ಲಿಯೂ ಶ್ರೇಷ್ಠತೆಯನ್ನು ಕಾಣುತ್ತಾಳೆ. ಇದೇ ರೀತಿಯಾಗಿ ಕಾವ್ಯಾನಂದ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ಸಿದ್ಧಯ್ಯ ಪುರಾಣಿಕರು ತಮ್ಮ 'ಕರುಣಾ ಶ್ರಾವಣಾ' ಕವನ ಸಂಕಲನದಲ್ಲಿನ 'ಪೂರ್ವಾಂಗನೆ ಪಶ್ಚಿಮಾಂಗನೆಗೆ' ಎಂಬ ಕವಿತೆಯಲ್ಲಿ "ನಾ ಕರಿಯಳೆಂದು ನೀ ಜರಿಯಬೇಡ ಬಿಳಿಗೆಳತಿ ಗರ್ವದಿಂದ

ಕಪ್ಪಿಗಿಂತ ಬಿಳಿಬಣ್ಣ ಹೆಚ್ಚು ಹೇಳಾವ ಹಿರಿಮೆಯಿಂದ  
ಬಿಳಿಯ ಮೋಡ ನೀಡುವುದು ಇಳೆಗೆ ಬರಿ ಬೆಡಗು ಅಂದಚಂದ  
ಇಳಿಯ ಜೀವ ಮಳೆ ಬರುವುದಕ್ಕ ಕರಿಮೋಡ ಮಾತ್ರದಿಂದ" ॥

ಈ ವರ್ಣಮೈತ್ರಿ ಅನಿವಾರ್ಯ ಗೆಳತಿ ಸರ್ವತ್ರ ವಿಶ್ವಪ್ರಕೃತಿ  
ತೋರುವುದು ಇದನೆ ಸಾರುವುದು ಇದನೆ ಇದೆ ಅದರ ನೀತಿ  
ಹೋತ್ತಾರೆ ಕೆಂಪು ಮತ್ತಷ್ಟು ಹಳದಿ ಹೊತ್ತೇಕೆ ಬಿಳಿಲು ಗೆಳತಿ  
ನಿನ್ನಂಗ ಬಿಳಿದು ಇದೊ ನೆರಳು ಕಪ್ಪು ಎಲ್ಲಿಹುದು ವೈರ ಗೆಳತಿ

ಎಂದು ಕಪ್ಪುಬಿಳುಪಿನ ಕುರಿತು ಸುಮಾರು ಏಳು ನುಡಿಗಳಲ್ಲಿ ವರ್ಣಮೈತ್ರಿ ಅನಿವಾರ್ಯ ಎಂಬ ವಿಶ್ವತತ್ವ ಕವಿತೆಯಲ್ಲಿ ಒಡಮೂಡಿಸಿದ್ದಾರೆ.

ಕರಡಿಮೃಗವನ್ನು ಪಳಗಿಸಿ ಮಾನವನು ಅದನ್ನು ಕುಣಿಸಿ, ಆಡಿಸಿ ತನ್ನ ಉಪಜೀವನವನ್ನು ನಡೆಸುತ್ತಿದ್ದದ್ದು, ಕರಡಿಯನ್ನು ಸಾಕಿಸಲುಹಿ ಅದರ ಕುಣಿತದಿಂದ ಬಂದ ಆದಾಯದಿಂದ ಬದುಕು ಸಾಗಿಸುತ್ತಿದ್ದನ್ನು ನೋಡಿದ್ದೇವೆ, ಕೇಳಿದ್ದೇವೆ. ಇದನ್ನು ನೋಡಿದರೆ ಬೇಂದ್ರೆಯವರ ಕರಡಿಯ ಕುಣಿತ ಕವಿತೆ ನೆನಪಿಗೆ ಬರುತ್ತದೆ.

ಕಬ್ಬಿಣ ಕೈಕಡಗ ಕುಣಿಕೋಲು ಕೂದಲು  
ಕಂಬಳಿ ಹೊದ್ದಾವ ಬಂದಾನ ।  
ಗುಡುಗುಡುಗುಟ್ಟುತ ಕಡಗವ ಕುಟ್ಟುತ  
ಕರಡಿಯನಾಡಿಸುತ ನಿಂದಾನ॥

ಬಂದಾರ ಬರ್ರೇವ್ವ ಕಂದಾನ ತರ್ರೇವ್ವ  
ಅಂಜಿಕಿ ಗಿಂಜಿಕಿ ಕೊಂದಾನ ।  
ರೋಮರೋಮಗಳಲ್ಲಿ ಭೀಮರಕ್ಷಯ ಬಲ  
ಕೊರಳಾಗ ಕಟ್ಟೇರಿ ಒಂದಾನ ॥

ನಾವು ಚಿಕ್ಕವರಿದ್ದಾಗ ಕರಡಿಯ ಕರಿಕೂದಲಿನಲ್ಲಿ ಭೀಮನ ಶಕ್ತಿಯೇ ಅಡಗಿದೇನೋ ಎಂಬಂತೆ ಅದರ ಕೂದಲನ್ನು ಕಿತ್ತಿ ನಮ್ಮ ಕೊರಳಿಗೆ ಹಾಗೂ ಕಾಲಿನ ಬೆರಳಿಗೆ ಕಟ್ಟಿ, ಇನ್ನು ನಿನಗೆ ಯಾವ ಕೇಡಾಗದು ಎಂದು ಹೇಳಿ ಧೈರ್ಯತುಂಬುತ್ತಿದ್ದರು.

ಕರಿ ಬಣ್ಣದ ಬೆಕ್ಕು–ನಾಯಿಗಳಿದ್ದರೆ ಮನೆಗೆ ದೃಷ್ಠಿಯಾಗದೆಂದು, ಮನೆ ಏಳ್ಗೆಯಾಗುತ್ತದೆಂದು ಮುದ್ದಾಮಾಗಿ ಮುದ್ದುಮಾಡಿ ಸಾಕುವವರನ್ನು ಕಾಣಬಹುದು. ಸ್ತ್ರೀಯರು ಧರಿಸುವ ಮಾಂಗಲ್ಯ ಕೂಡ ಕರಿಮಣಿಗಳಿಂದ ಕೂಡಿರುತ್ತದೆ. ಅವಳ ಪಾಲಿಗೆ ಅದೊಂದು ದೈವಸ್ವರೂಪ, ಸರ್ವಸ್ವವೂ ಕೂಡ ಆಗಿರುತ್ತದೆ. ಕರಿಜಾಲಿ ಮರದ ಕಟ್ಟಿಗೆಯು ಬಹಳ ಕಾಲ ತಾಳಿಕೆ ಬರುವುದರಿಂದ ಮನೆಗಳಿಗೆ ಕಂಬ, ತೊಲೆ,ಕಿಟಕಿ ಇತರೆ ಉಪಕರಣಗಳನ್ನಾಗಿ, ರೈತ ತನ್ನ ಕೃಷಿ ಉಪಕರಣಗಳನ್ನಾಗಿ ಮಾಡಿಕೊಳ್ಳುತ್ತಾನೆ. ಆಗ ಕಪ್ಪುಯೆಂಬ ಭಾವನೆ ಮೂಡುವುದಿಲ್ಲವೆ? ಮೂಡಿದರೂ ಜಾಣ ಕುರುಡರಾಗಿರುತ್ತೇವೆ.! ನಾವುಗಳೆಲ್ಲಾ ಸಂಪೂರ್ಣವಾಗಿ ನಿದ್ದೆ ಮಾಡುವುದು ಕತ್ತಲಲ್ಲಿ ಅಲ್ಲವೆ?!! ಕುವೆಂಪುರವರು ತಮ್ಮ ಮಹಾರಾತ್ರಿ ಕೃತಿಯಲ್ಲಿ ರಾತ್ರಿಯ ಕುರಿತು "ಭೂರಮೆಯು ಸ್ವರ್ಗರಮೆಯನ್ನಪ್ಪುವಾ ರಾತ್ರಿ, ಮಂಗಳದ ಸೊದೆಸುರಿವ ರಾತ್ರಿ, ಇದು ಚಿರಸ್ಮರಣೀಯವಾಗಿರುವ ರಾತ್ರಿ"ಯೆಂದು ಹೇಳಿದ್ದಾರೆ.

ಕಪ್ಪುಬಣ್ಣದ ಆನೆಗಳಿಂದಲೇ ಹಿಂದೆ ಸಾಮ್ರಾಟರು ತಮ್ಮ ದಿಗ್ವಿಜಯ ಮೆರೆದು ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡು, ಗಜಗಳ ಮೇಲೆಯೇ ಅಂಬಾರಿಯಿಟ್ಟು ಮೆರೆದಿದ್ದು! ಮೈಸೂರಿನ ದಸರಾದ ಏಳುನೂರಕ್ಕೂ ಅಧಿಕ ಕೆ.ಜಿ. ತೂಕದ ಅಂಬಾರಿಯನ್ನು ಹೊತ್ತು ರಾಜಗಾಂಭೀರ್ಯದಿಂದ ಸಾಗುವಪರಿ ಕಣ್ತುಂಬಿಕೊಳ್ಳಲು ಎರಡು ಕಣ್ಣುಗಳು ಸಾಲದು. ಅವುಗಳ ಶಕ್ತಿ–ಸಾಮರ್ಥ್ಯದಿಂದಲೇ ರಾಜರಿಗೆ–ಚಕ್ರವರ್ತಿಗಳಿಗೆ ಗೌರವ ಸಲ್ಲುತ್ತಿತ್ತು, ಸಲ್ಲುತ್ತಿದೆ ಕೂಡ.

ರಾಮಸೇತುವೆಯನ್ನು ಕಟ್ಟಿದ್ದು ಕೂಡ ಕರಿಗಲ್ಲುಗಳಿಂದಲೆ!. ಕರಿಕಲ್ಲುಗಳು ಬಹಳ ಗಟ್ಟಿ, ಹೆಚ್ಚು ತಾಳಿಕೆ ಬರುತ್ತವೆಯೆಂದು ಅದರ ಉಪಯೋಗ ಹೆಚ್ಚು. ಶಿವಲಿಂಗಗಳು ಬಹುತೇಕವಾಗಿ ಕಪ್ಪುಶಿಲೆಯಿಂದಲೇ ನಿರ್ಮಿಸಿರುವುದು. ಲಿಂಗುವಿನ ಸೌಂದರ್ಯ ಹೆಚ್ಚುವುದು ಕಪ್ಪುವರ್ಣದಿಂದಲೆ!. ಇದರಿಂದ ಈ ಶಿಲೆಯ ಶ್ರೇಷ್ಠತೆಯನ್ನು ಅರಿಯಬಹುದು.

ಸ್ತ್ರೀ–ಪುರುಷರ ಶರೀರದ ಭಾಗದಲ್ಲಿ ಕಪ್ಪು ಮಚ್ಚೆಗಳಿದ್ದರೆ, ಅವು ಗೆಳೆಯ–ಗೆಳತಿಯರೆಂದು ಕರೆದುಕೊಂಡು ಬಂದಿರುವ ರೂಢಿಯಾಗಿದೆ. ಅವುಗಳು ಕೂಡ ಬಲ–ಎಡ ಭಾಗದಲ್ಲಿದ್ದರೆ ಅದೃಷ್ಟದ ಸಂಕೇತಗಳೆಂದು ಭಾವಿಸುತ್ತಾರೆ. ಜಗತ್ತಿನ ಎಲ್ಲ ದೇಶಗಳಲ್ಲಿರುವ ರಸ್ತೆಗಳು ಅಂದವಾಗಿ, ಸುಂದರವಾಗಿ ಕಾಣುವುದು; ಅಲ್ಲಿ ಹಾಕಿರುವ ಕಪ್ಪು ಡಾಂಬರಿನಿಂದಲೆ ಅಲ್ಲವೆ?!!. ವಾಹನಗಳ ಚಕ್ರದ ಟಾಯರ್‌ಗಳು ಕೂಡ ಕಪ್ಪುಬಣ್ಣದಿಂದಲೇ ಕೂಡಿರುತ್ತವೆ!.

ಕಪ್ಪು ಚಹ ಕೂಡ ಇತ್ತೀಚಿಗೆ ಬಹಳ ಜನರು ಅದರ ಗುಣವಿಶೇಷತೆಗಳನ್ನು ಅರಿತು ಸೇವಿಸುತ್ತಿದ್ದಾರೆ. ಕೇರಳರಾಜ್ಯದಲ್ಲಿ ಬ್ಲ್ಯಾಕ್‌ಟೀಯನ್ನು ಹೆಚ್ಚಾಗಿ ಸೇವಿಸುತ್ತಾರೆ. ಆರೋಗ್ಯಕ್ಕೆ ಹಾಲು ಬೆರೆಸಿದ ಚಹಕ್ಕಿಂತ ಕಪ್ಪುಚಹವೇ ಶ್ರೇಷ್ಠವೆಂಬುದನ್ನು ಹಲವು ವೈಜ್ಞಾನಿಕ ಸಂಶೋಧನೆಗಳಿಂದ ದೃಢಪಟ್ಟಿದೆ. ಈ ಚಹದ ಸೇವನೆಯಿಂದ ಹೃದಯ ಸಂಬಂಧಿ ಕಾಯಿಲೆಗಳು ಕಡಿಮೆಯಾಗುತ್ತದೆಂದು; ಇದರಲ್ಲಿರುವ ಫ್ಲೇವೈನೋಯ್ಡ್ [ಈಟಚಿತುಟಿಉಝ] ಅಂಶವು ನಮ್ಮ ದೇಹದಲ್ಲಿರುವ ಕೊಲೆಸ್ಟ್ರಾಲ್ ಹೆಚ್ಚಾಗುವುದನ್ನು ತಡೆಯುತ್ತದೆ ಮತ್ತು ಹೃದಯದಲ್ಲಿ ರಕ್ತ ಹೆಪ್ಪುಗಟ್ಟುವುದನ್ನು ನಿಯಂತ್ರಿಸುತ್ತದೆ. ಜೀರ್ಣಶಕ್ತಿ ಹೆಚ್ಚಿಸಲು ತುಂಬಾ ಸಹಕಾರಿಯಾಗುವುದರೊಂದಿಗೆ ದೇಹದ ತೂಕ ಕಡಿಮೆ ಮಾಡುತ್ತದೆ. ಬ್ಲ್ಯಾಕ್ ಟೀಗೆ ಸಕ್ಕರೆ ಬದಲಾಗಿ ಜೇನುತುಪ್ಪ ಬೆರೆಸಿ ಕುಡಿದರೆ, ದೇಹದ ಬೊಜ್ಜು ಕೂಡ ಬೇಗ ಕರಗಿಸಬಹುದು.

ಕಬ್ಬಿಣ ಕೂಡ ಕಪ್ಪು. ಇದರ ಬಳಕೆಯಿಂದ ಮಾನವನು ಬೃಹತ್ತಾದ ಕಟ್ಟಡಗಳನ್ನು, ಆಣೆಕಟ್ಟುಗಳನ್ನು ನಿರ್ಮಿಸುತ್ತಿದ್ದಾನೆ. ರೈತ, ಮನೆಯಲ್ಲಿ ಕೊಡಲಿ, ಕುಡಗೋಲು, ಕುಡ, ಪಾರ, ಗುದ್ದಲಿ–ಪಿಕಾಶಿ,ಹಾರೆ, ಬಾಯಿಬಡಗ

ಇನ್ನೂ ಅನೇಕ ಉಪಕರಣಗಳನ್ನಾಗಿ ಬಳಸಿಕೊಂಡು ಕೃಷಿ ಚಟುವಟಿಕೆಯಲ್ಲಿ ನಿರತನಾಗಿ ಭೂಮಿಯನ್ನು ಹದವಾಗಿ ಮಾಡಿ, ಉತ್ತಲು, ಬೆಳೆಯಲು ಬಳಸಿಕೊಳ್ಳುತ್ತಿದ್ದಾನೆ.

ಕಲ್ಲಿದ್ದಲು ಅತಿ ಹೆಚ್ಚು ಶಾಖಶಕ್ತಿಯನ್ನು ನೀಡಬಲ್ಲ ವಸ್ತು. ಇದನ್ನು ಬಳಸಿ ವಿದ್ಯುತ್‌ಶಕ್ತಿಯನ್ನು ಉತ್ಪಾದಿಸಿ ಹಳ್ಳಿ–ನಗರ–ಬೀದಿ ದೀಪಗಳನ್ನು ಬೆಳಗಿಸಲು, ಕಾರ್ಖಾನೆಗಳಿಗೆ ವಿದ್ಯುತ್ತನ್ನು ಪೂರೈಕೆ ಮಾಡಲಾಗುತ್ತದೆ. ರೈಲ್ವೆ ಇಂಜಿನ್‌ಗಳಲ್ಲಿ ಬಳಸಿ, ಅದರ ಶಕ್ತಿಯ ಸಹಾಯದಿಂದ ರೈಲನ್ನು ಓಡಿಸಿ ಪ್ರಯಾಣಿಕರನ್ನು ಹೊತ್ತೊಯ್ದು ಆದಾಯಗಳಿಸಲಾಗುತ್ತದೆ. ಮನೆಕಟ್ಟಲು ಬಳಸುವ ಇಟ್ಟಿಗೆಗಳನ್ನು, ಕುಂಬಾರ ತಯಾರಿಸಿದ ಮಡಿಕೆಗಳನ್ನು ಸುಡಲು ಕಲ್ಲಿದ್ದಲನ್ನು ಬಳಸಲಾಗುತ್ತದೆ.

ಯಾವುದನ್ನು ನಾವು ಕೀಳಾಗಿ ಕಾಣಬಾರದು. ಅದರ ವರ್ಣದಿಂದಲೇ ಗುಣವನ್ನು ಅಳೆಯಬಾರದು. ಅಸಡ್ಡೆಯಿಂದ ಕಾಣಬಾರದು. ಕಪ್ಪುವರ್ಣದಲ್ಲಿಯೂ ಒಳ್ಳೆಯ ಅಂಶಗಳು ಅಡಗಿರುವುದನ್ನು ಅರಿಯಲು ಪ್ರಯತ್ನಿಸಬೇಕು. ಸೃಷ್ಠಿಯಲ್ಲಿರುವ ಪ್ರತಿಯೊಂದು ವಸ್ತು–ಪ್ರಾಣಿ–ಪಕ್ಷಿ–ಜೀವಿ–ಚರಾಚರಗಳಲ್ಲಿಯೂ ತನ್ನದೆಯಾದ ವೈಶಿಷ್ಟ್ಯದಿಂದ ಕೂಡಿ, ಈ ಜಗತ್ತಿಗೆ ಒಂದಿಲ್ಲೊಂದು ರೀತಿಯಲ್ಲಿ ಸಹಕಾರಿಯಾಗಿವೆ. ಅವುಗಳ ಜೊತೆ ಸಹಮತ–ಸಾಮರಸ್ಯ–ಸಹಬಾಳ್ವೆಯನ್ನು ನಡೆಸಿಕೊಂಡು ಹೋಗಬೇಕಾಗಿದ್ದು ಮಾನವನ ಕರ್ತವ್ಯವಾಗಿದೆ.

ಒಟ್ಟನಲ್ಲಿ ಹೇಳುವುದಾದರೆ, ಕಪ್ಪುಯೆಂದು ನಾವುಗಳು ಹೀಗಳೆಯುವುದನ್ನು ಬಿಟ್ಟು ಅದರಲ್ಲಿಯೂ ಉತ್ತಮ ಅಂಶಗಳು ಅಡಕವಾಗಿವೆಯೆಂದು ಅರಿತು ಬಾಳುವುದು ಮುಖ್ಯವಾಗುತ್ತದೆ. 'ಆಕಳು ಕಪ್ಪಾದರೆ ಹಾಲು ಕಪ್ಪೆ?' ಎಂಬ ಗಾದೆ ಮಾತಿನಂತೆ ಇಲ್ಲಿ ಕಪ್ಪು ಬಣ್ಣಕ್ಕೆ ಮಹತ್ವ ನೀಡದೆ ಅದು ಕೊಡುವ ಹಾಲನ್ನು ಅಮೃತ ಸಮಾನವೆಂದು ಭಾವಿಸಿ ಶ್ರೇಷ್ಠತೆಯನ್ನು ನೀಡುವಂತೆ ಕಪ್ಪುಬಣ್ಣಕ್ಕೂ ಮಾನ್ಯತೆಯನ್ನು ನೀಡಿ, ಮೌಢ್ಯಭಾವನೆಯನ್ನು ತೊಲಗಿಸಬೇಕು. ಈ ಜಗತ್ತಿನಲ್ಲಿ ಯಾವುದೂ ಕೆಟ್ಟದ್ದಲ್ಲ, ಎಲ್ಲದರಲ್ಲಿಯೂ ಒಂದಿಲ್ಲೊಂದು ಉತ್ತಮಾಂಶ ಅಡಗಿರುತ್ತದೆಂಬುದನ್ನು ಅರಿಯುವುದು ಬಹಳ ಅವಶ್ಯವಾಗಿದೆ. ಕಲಾಂರು ಹೇಳಿದಂತೆ "ಕಪ್ಪುಬಣ್ಣ ಅಶುಭ ಸೂಚಕವಾಗಿರಬಹುದು ಆದರೆ ಪ್ರತಿ ಕಪ್ಪುಹಲಗೆ ವಿದ್ಯಾರ್ಥಿಗಳ ಬದುಕನ್ನು ಬೆಳಗಿಸಬಲ್ಲದು" ಎಂಬ ಪದಪುಂಜಗಳನ್ನು ನಾವುಗಳು ನೆನೆದು, ಅರಿತು ಬಾಳಿದರೆ ಜೀವನದಲ್ಲಿ ಯಶಸ್ಸು ಸಾಧ್ಯ.

**ಆಧಾರ ಗ್ರಂಥಗಳು**


1. ಗರತಿಯ ಹಾಡು – ಸಂಪಾದಕರು ಹಲಸಂಗಿ ಗೆಳೆಯರು.
2. ಮಹಾರಾತ್ರಿ (ನಾಟಕ) – ಕುವೆಂಪು
3. ಕುವೆಂಪುರವರ ಕೋಗಿಲೆ ಮತ್ತು ಸೋವಿಯಟ್ ರಷ್ಯಾ – ಕವನ.
4. ಕುವೆಂಪುರವರ ಪಕ್ಷಿಕಾಶಿ ಕವನ ಸಂಕಲನ.
5. ಸಿದ್ಧಯ್ಯ ಪುರಾಣಿಕರ ಪೂರ್ವಾಂಗನೆ ಮತ್ತು ಪಶ್ಚಿಮಾಂಗನೆ ಕವನ.
6. ಬೇಂದ್ರೆಯವರ ಕರಡಿಯ ಕುಣಿತ ಕವನ.
7. ರಂಜಾನ ದರ್ಗಾರವರ ನೆಲ್ಸನ್ ಮಂಡೇಲಾ ಕವನ.
8. ಜಿ.ಎಸ್.ಶಿವರುದ್ರಪ್ಪನವರ ಪ್ರೀತಿ ಇಲ್ಲದ ಮೇಲೆ ಕವನ.
9. ಅಂತರ್ಜಾಲ ತಾಣ. (ಇಂಟರ್‌ನೆಟ್).